

ವಾಚ್‌ಗಳು ಈಗ ಬರೀ ಸಮಯ ನೋಡಲಷ್ಟೇ ಅಲ್ಲ, ಸ್ಟೈಲಿಷ್ ಆಗಿಯೂ ಬಳಕೆಯಾಗುತ್ತಿವೆ. ಬ್ರೇಸ್ಲೆಟ್ ಮಾದರಿಯ, ಫಿಂಗರ್ ರಿಂಗ್ ರೀತಿಯ ವಾಚ್‌ಗಳು ಈಗ ಟ್ರೆಂಡಿಯಾಗಿವೆ.

■ ಆಶಾ ಎಸ್. ಕುಲಕರ್ಣಿ

# ಸ್ಟೈಲಿಷ್ ವಾಚ್

## ಮಹಿಳೆಯರ ಮೆಚ್ಚು

ವಾಚ್ ಬರೀ ಸಮಯ ನೋಡುವ ಸಾಧನವಲ್ಲ, ಅದೊಂದು ಫ್ಯಾಷನ್ ಆ್ಯಕ್ಸೆಸರಿ. ವೈವಿಧ್ಯಮಯ ಫ್ಯಾಷನಬಲ್ ವಾಚ್‌ಗಳು ಮಾರುಕಟ್ಟೆಗೆ ಬಂದಿದ್ದು, ಸ್ಟೈಲಿಷ್ ಆಗಿ ಕಾಣಬೇಕೆನ್ನುವವರ ಮನ ತಣಿಸುತ್ತಿದೆ. ಮಹಿಳೆಯರು ವಾಚ್ ಅನ್ನು ಸಮಯ ನೋಡಲು ಬಳಸುವ ಬದಲಿಗೆ ಫ್ಯಾಷನ್ ಪರಿಕರವಾಗಿ ಕಾಣುವುದೇ ಹೆಚ್ಚು. ವಾಚ್‌ಗಳು ಈಗ ಹೊಸ ಟ್ರೆಂಡ್ ಅನ್ನೇ ಸೃಷ್ಟಿಸುತ್ತಿವೆ.

ಆಧುನಿಕ ಮನೋಭಾವದ ಮಹಿಳೆಯರು ತಾವು ಧರಿಸುವ ಬಟ್ಟೆಗೆ ಮ್ಯಾಚ್ ಆಗುವ ವಾಚ್‌ಗಳನ್ನು ತಮ್ಮ ವಾರ್ಡ್‌ರೋಬ್‌ಗಳಲ್ಲಿ ಸಂಗ್ರಹಿಸಿಟ್ಟಿದ್ದಾರೆ. ಬಟ್ಟೆ ಹಾಗೂ ಸಂದರ್ಭಗಳಿಗೆ ಸೂಕ್ತವೆನಿಸುವಂತಹ ಮಾದರಿಯ ವಾಚುಗಳನ್ನು ಧರಿಸುವುದರ ಮೂಲಕ ಸ್ಟೈಲಿಷ್ ಲುಕ್ ಪಡೆದುಕೊಳ್ಳಬಹುದು.

### ವಾಚ್‌ನಲ್ಲಿ ವೈವಿಧ್ಯ

ಕೈಗಡಿಯಾರದಲ್ಲಿ ಹಲವು ಮಾದರಿ ಇದ್ದು ಮಹಿಳೆಯರ ಮನಸೆಳೆಯುತ್ತಿವೆ. ಬ್ರೇಸ್ಲೆಟ್ ಮಾದರಿಯ ವಾಚುಗಳು, ಮೆಟಲ್ ವಾಚುಗಳು, ಗೋಲ್ಡ್ ಇಮಿಟೇಶನ್ ವಾಚ್‌ಗಳು ನೋಡಲು ಆಕರ್ಷಕವಾಗಿದ್ದು ಹೆಚ್ಚಾಗಿ ಮಾಡರ್ನ್ ಮತ್ತು ಫ್ಯೂಷನ್ ಉಡುಪುಗಳೊಂದಿಗೆ ಧರಿಸಬಹುದು. ಕ್ಯಾಷುವಲ್ ವಾಚುಗಳು ದಿನಬಳಕೆಗೆ ಸೂಕ್ತವಾಗಿದ್ದು ವಿವಿಧ ಅಳತೆ ಹಾಗೂ ಗಾಢ ಬಣ್ಣಗಳಲ್ಲಿ ದೊರೆಯುತ್ತವೆ. ಇವುಗಳ ಡಯಲ್‌ಗಳು ವಿವಿಧ ವಿನ್ಯಾಸ ಹಾಗೂ ಸೈಜುಗಳಲ್ಲಿ ದೊರೆಯುತ್ತಿದ್ದು, ಇವುಗಳನ್ನು ಎವರ್‌ಗ್ರೀನ್ ಟ್ರೆಂಡ್ ಎಂದೇ ಹೇಳಬಹುದು. ಇಂತಹ ವಾಚುಗಳ ಬೆಲ್ಟ್‌ಗಳಲ್ಲಿಯೂ ವಿವಿಧ ಆಯ್ಕೆಗಳು ಲಭಿಸುತ್ತಿವೆ. ಲೆದರ್ ಬೆಲ್ಟ್, ಪ್ಲಾಸ್ಟಿಕ್ ಬೆಲ್ಟ್, ಬ್ಲಾಕ್ ಮೆಟಲ್, ಸಿಲ್ವರ್ ಮೆಟಲ್ ಬೆಲ್ಟ್, ಇಮಿಟೇಶನ್ ಗೋಲ್ಡ್ ಬೆಲ್ಟ್ ಇನ್ನಿತರ ಬಗೆಯ ಬೆಲ್ಟುಗಳಲ್ಲಿ ಲಭ್ಯವಿವೆ. ಇದು ಜನಸಾಮಾನ್ಯರ ಕೈಗೆಟಕುವ ಬೆಲೆಯಲ್ಲಿ ದೊರೆಯುತ್ತದೆ.

ಇದೀಗ ಆ್ಯಂಟಿಕ್ ವಾಚುಗಳು ಸಹ ಮಾರುಕಟ್ಟೆಯಲ್ಲಿ ಲಭ್ಯ. ಇವು ಮೆಟಲ್ ವಾಚುಗಳೇ ಆಗಿದ್ದು ಆ್ಯಂಟಿಕ್ ಡಿಸೈನನ್ನು ಹೊಂದಿರುತ್ತವೆ. ಇವುಗಳನ್ನು ಡಲ್ ಗೋಲ್ಡ್ ಕೋಟೆಡ್ ಡಯಲ್ ಮತ್ತು ಮೆಟಲ್ ಬೆಲ್ಟ್‌ಗಳಿಂದ ತಯಾರಿಸಲಾಗಿದ್ದು, ಯಾವುದೇ ಬಣ್ಣದ ಬಟ್ಟೆಗಳಿಗೂ ಮ್ಯಾಚ್ ಮಾಡಿ ಧರಿಸಬಹುದು. ಸ್ಪೋರ್ಟ್ಸ್ ವಾಚ್‌ಗಳು ಸಾಧಾರಣ ವಾಚ್‌ಗಳಿಗಿಂತ ಭಿನ್ನವಾದ ಆಯ್ಕೆಗಳನ್ನು ಮತ್ತು ವೈಶಿಷ್ಟ್ಯಗಳನ್ನು ಹೊಂದಿವೆ. ಇವುಗಳ ಡಯಲ್‌ಗಳು ಗಾತ್ರದಲ್ಲಿ ದೊಡ್ಡದಾಗಿದ್ದು ಸುಲಭವಾಗಿ ಸಮಯ ವೀಕ್ಷಿಸಲು ಸಹಾಯಕವಾಗಿರುತ್ತವೆ. ಆಟಗಳಲ್ಲಿ ಉಪಯುಕ್ತವಾಗುವಂತಿರುವ ಇವುಗಳು ಸಾಮಾನ್ಯ ಬಳಕೆಗೂ ಬರುತ್ತವೆ ಮತ್ತು ನೋಡಲೂ ಕೂಡ ಆಕರ್ಷಕವಾಗಿದ್ದು ಯುವಜನತೆಯನ್ನು ತನ್ನತ್ತ ಬಹುಬೇಗ ಆಕರ್ಷಿಸುತ್ತವೆ. ಇವುಗಳಲ್ಲಿ ವಾಟರ್ ಪ್ರೂಫ್ ವಾಚ್‌ಗಳೂ ಲಭ್ಯ.

### ಮಕ್ಕಳ ಅಭಿರುಚಿಗೆ ತಕ್ಕಂತೆ...

ವಾಟರ್‌ಪ್ರೂಫ್ ವಾಚ್‌ಗಳು ಈಗಿನ ಟ್ರೆಂಡ್. ಈಜುವಾಗ ಈ ವಾಟರ್‌ಪ್ರೂಫ್ ವಾಚ್‌ಗಳನ್ನು ಬಳಸಲಾಗುತ್ತದೆ. ಚಿಕ್ಕ ಮಕ್ಕಳ ಅಭಿರುಚಿಗೆ ತಕ್ಕಂತೆ ಇದೀಗ ವಾಚ್‌ಗಳ ಡಯಲ್‌ಗಳು ಯಾವುದಾದರೂ ಕಾರ್ಟೂನ್ ಪಾತ್ರವನ್ನು ಬಿಂಬಿಸುವ ಮಾದರಿಗಳಲ್ಲಿ ದೊರೆಯುತ್ತಿದ್ದು, ಟ್ರೆಂಡಿಯಾಗಿವೆ. ಇಷ್ಟೇ ಅಲ್ಲದೆ ಇದಕ್ಕೆ ವಯಸ್ಸಿನ ಮಿತಿಯಿಲ್ಲ. ಈ ಬಗೆಯ ವಾಚ್‌ಗಳನ್ನು ಕಾಲೇಜು